
UASB LIBRARY
Newspaper Clippings
Pg .1 Thursday 20-05-2021 Jai Kisan



ಕೃಷಿ ಚಟುವಟಿಕೆಗೂ ಮುನ್ನ ಅನ್ನದಾತರು ಕಂಗಾಲು | ಕರೊನಾ ಕಷ್ಟದ ನಡುವೆ ಆರ್ಥಿಕ ಹೊರೆ

ಮುಂಗಾರು ಹೊಸ್ತಿಲಲ್ಲಿ ಬಿತ್ತನೆ ಬೀಜ ದುಬಾರಿ

■ ಮಂಜುನಾಥ ಕೋಳಿಗುಡ್ಡ ಬೆಳಗಾವಿ

ಕಳೆದ ಹಲವು ವರ್ಷಗಳಿಂದ ಅತಿವೃಷ್ಟಿ ಅಥವಾ ಅನಾವೃಷ್ಟಿಯ ನಿರಂತರ ಸಮಸ್ಯೆಗೆ ಸಿಲುಕಿ ಸುಸ್ತಾಗಿರುವ ರೈತಾಪಿ ವರ್ಗಕ್ಕೆ ಕರೊನಾ ರಣಕೇಕೆ ಶುರುವಾದ ಮೇಲೆ ಬದುಕೇ ದುಸ್ತರವಾಗಿದೆ. ಕರೊನಾ ತಂದೊಡ್ಡಿದ ಎಲ್ಲ ಕಷ್ಟನಷ್ಟಗಳ ನಡುವೆಯೂ ಬಿತ್ತನೆ ಚಟುವಟಿಕೆಯನ್ನಾದರೂ ಆರಂಭಿಸೋಣವೆಂದರೆ, ಗಗನಕ್ಕೇರುತ್ತಿರುವ ಬಿತ್ತನೆ ಬೀಜಗಳ ಬೆಲೆ ಚಿಂತೆತಂದೊಡ್ಡಿದೆ. ಒಟ್ಟಿನಲ್ಲಿ ಮುಂಗಾರು ಸಮೀಪಿಸುತ್ತಿರುವ ಹೊತ್ತಿನಲ್ಲಿ ಅನ್ನದಾತನಿಗೆ ನೆಮ್ಮದಿ ಇಲ್ಲದಂತಾಗಿದೆ. ಕರೊನಾ ಮಹಾಮಾರಿ ರೈತ ಸಮುದಾಯಕ್ಕೆ ತಂದಿಟ್ಟಿರುವ ಸಮಸ್ಯೆ ಒಂದೆರಡಲ್ಲ. ಕಳೆದ ನಾಲ್ಕೈದು ತಿಂಗಳಿಂದ ನಿರಂತರವಾಗಿ ಏರುತ್ತಿರುವ ಡೀಸೆಲ್ ದರ, ಕೃಷಿ ಯಂತ್ರೋಪಕರಣಗಳ ಬಾಡಿಗೆ ದರ, ಕಾರ್ಮಿಕರ ದಿನಗೂಲಿ ಹೆಚ್ಚಳ, ರಾಸಾಯನಿಕ ಗೊಬ್ಬರಗಳ ದರ ಏರಿಕೆಯಿಂದಾಗಿ ಚೇತರಿಸಿಕೊಳ್ಳಲಾಗುತ್ತಿಲ್ಲ. ಈ ನಡುವೆ ಬಿತ್ತನೆ ಬೀಜಗಳ ದರ ಏರಿಕೆಯಾಗಿದ್ದರಿಂದ ರೈತರು ಕಂಗಾಲಾಗಿದ್ದಾರೆ.

ಬೀಜಕ್ಕೆ ಬಲು ಬೇಡಿಕೆ: ಈ ವರ್ಷ ರಾಜ್ಯದಲ್ಲಿ ಮುಂಗಾರು ಹಂಗಾಮಿನಲ್ಲಿ 78.40 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆಯಾಗುತ್ತದೆ. ದಕ್ಷಿಣ ಭಾಗದ ಜಿಲ್ಲೆಗಳಲ್ಲಿ ರಾಗಿ, ಭತ್ತ, ಅಲಸಂದೆ, ಉದ್ದು , ಹೆಸರು ಬಿತ್ತನೆಯಾಗುತ್ತದೆ. ಉತ್ತರ ಕರ್ನಾಟಕದ ಜಿಲ್ಲೆಗಳಲ್ಲಿ ಮೆಕ್ಕೆಜೋಳ, ಸೂರ್ಯಕಾಂತಿ, ಜೋಳ, ಸಜ್ಜೆ, ಶೇಂಗಾ, ಸೋಯಾಬಿನ್, ಸಿರಿಧಾನ್ಯಗಳನ್ನು ಬಿತ್ತನೆ ಮಾಡಲಾಗುತ್ತದೆ. ಸುಮಾರು 8 ರಿಂದ 9.5 ಲಕ್ಷ ಕ್ವಿಂಟಾಲ್ ನಷ್ಟು ನಾನಾ ಬಿತ್ತನೆ ಬೀಜಗಳ ಅವಶ್ಯಕತೆ ಇದೆ. ಕಳೆದ ವರ್ಷ ಬಹುತೇಕ ಕಡೆಗಳಲ್ಲಿ ನಿರೀಕ್ಷಿತ ಪ್ರಮಾಣದಲ್ಲಿ ಇಳುವರಿ ಬಂದಿರಲಿಲ್ಲ.

◗ಪುಟ 4



ಬೆಳಗಾವಿ ಕೃಷಿ ಇಲಾಖೆ ಗೋದಾಮಿನಲ್ಲಿ ಸಂಗ್ರಹಿಸಿಟ್ಟ ವಿವಿಧ ಕಂಪನಿಗಳ ಬಿತ್ತನೆ ಬೀಜಗಳ ಚೀಲಗಳು.

ಸಬ್ಸಿಡಿ ದರವೇ ಹೆಚ್ಚಳ

ಕೃಷಿ ಇಲಾಖೆಯು 2021-22ನೇ ಸಾಲಿನ ಮುಂಗಾರು ಹಂಗಾಮಿನಲ್ಲಿ ಸಾಮಾನ್ಯ ರೈತರಿಗೆ ಶೇ. 50 ಮತ್ತು ಎಸ್‌ಸಿ, ಎಸ್‌ಟಿ ರೈತರಿಗೆ ಶೇ. 75ರಷ್ಟು ರಿಯಾಯಿತಿ ದರದಲ್ಲಿ ಬಿತ್ತನೆ ಬೀಜ ವಿತರಣೆಗೆ ನಿರ್ಧರಿಸಿದೆ. ಆದರೆ, ನಿಗದಿ ಪಡಿಸಿರುವ ದರದಲ್ಲಿ ಪ್ರತಿ ಕೆಜಿಗೆ 8ರಿಂದ 15 ರೂ. ಹೆಚ್ಚಳವಾಗಿದೆ. ಅಲ್ಲದೆ, ಸೂರ್ಯಕಾಂತಿ ಕೆಜಿಗೆ 405 ರೂ., ಹೈಬ್ರಿಡ್ ಜೋಳ ಕೆಜಿಗೆ 146 ರೂ. ಗಡಿ ದಾಟಿದೆ.

ಶೇ.50ರಷ್ಟು ರಿಯಾಯಿತಿ ದರದ ವಿವರ

ಬೀಜಗಳು	ರಿಯಾಯಿತಿ ದರ (ಕೆಜಿ)	
	2020	2021
ಸೂರ್ಯಕಾಂತಿ	180 ರಿಂದ 393	205ರಿಂದ 405
ಸಜ್ಜೆ	103 ರಿಂದ 220	110 ರಿಂದ 235
ಮೆಕ್ಕೆಜೋಳ	77 ರಿಂದ 255	80 ರಿಂದ 227
ಹೈಬ್ರಿಡ್ ಭತ	175 ರಿಂದ 180	175 ರಿಂದ 190
ಹೈಬ್ರಿಡ್ ಜೋಳ	35 ರಿಂದ 111	56 ರಿಂದ 146
ತೊಗರಿ	50.00	77 ರಿಂದ 80
ಹೆಸರು	72.59	99
ಉದ್ದು	76.00	79
ಸೋಯಾ ಅವರೆ	42.00	79
ನೆಲಗಡಲೆ ಕಾಯಿ	57 ರಿಂದ 59	67

ಕೆಲ ಬಿತ್ತನೆ ಬೀಜದ ದರದಲ್ಲಿ ಏರಿಕೆ ಕಂಡಿದೆ. ರೈತರ ಬೇಡಿಕೆಗೆ ಅನುಗುಣವಾಗಿ ಬೀಜ ಸಂಗ್ರಹ ಮಾಡಿಕೊಳ್ಳಲಾಗುತ್ತಿದೆ.

| ಶಿವನಗೌಡ ಪಾಟೀಲ
ಕೃಷಿ ಇಲಾಖೆ ಜಿಲ್ಲಾ ಜಂಟಿ ನಿರ್ದೇಶಕ, ಬೆಳಗಾವಿ

20-05-2021 Vv Pg 01

ರಸಗೊಬ್ಬರ ಸಬ್ಸಿಡಿ ಶೇಕಡ 140 ಹೆಚ್ಚಳ

ನವದೆಹಲಿ: ರಸಗೊಬ್ಬರ ಬೆಲೆ ಏರಿಕೆಯಿಂದ ಕಂಗಾಲಾಗಿದ್ದ ಕೃಷಿಕರಿಗೆ ಕೊನೆಗೂ ಶುಭ ಸುದ್ದಿ ದೊರಕಿದೆ. ಡೈ ಅಮೋನಿಯಂ ಫಾಸ್ಫೇಟ್ (ಡಿಎಪಿ) ರಸಗೊಬ್ಬರದ ಸಬ್ಸಿಡಿಯನ್ನು ಶೇಕಡ 140ರಷ್ಟು ಹೆಚ್ಚಿಸಲು ಕೇಂದ್ರ ಸರ್ಕಾರ ಬುಧವಾರ ತೀರ್ಮಾನಿಸಿದೆ. ಇದರಂತೆ, ಡಿಎಪಿ ರಸಗೊಬ್ಬರದ ಪ್ರತಿ ಬ್ಯಾಗ್‌ನ ಸಬ್ಸಿಡಿಯನ್ನು ಈಗಿರುವ 500 ರೂಪಾಯಿಯಿಂದ 1,200 ರೂಪಾಯಿಗೆ ಹೆಚ್ಚಿಸುವ ನಿರ್ಧಾರವನ್ನು ಸರ್ಕಾರ ಪ್ರಕಟಿಸಿದೆ. ರಸಗೊಬ್ಬರ ಬೆಲೆಗಳ ವಿಚಾರ ಚರ್ಚಿಸುವುದಕ್ಕೆ ಪ್ರಧಾನಿ ನರೇಂದ್ರ ಮೋದಿ ನೇತೃತ್ವದಲ್ಲಿ ಬುಧವಾರ ಸಭೆ ಸೇರಿದ್ದ ಉನ್ನತ ಮಟ್ಟದ ಸಮಿತಿ ಈ ಐತಿಹಾಸಿಕ ತೀರ್ಮಾನ ತೆಗೆದುಕೊಂಡಿದೆ. ಹೀಗಾಗಿ ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಡಿಎಪಿ ಬೆಲೆ ಏರಿಕೆಯಾದರೂ ಅದರ ಹೊರೆಯನ್ನು ಕೇಂದ್ರ ಸರ್ಕಾರವೇ ಹೊತ್ತುಕೊಳ್ಳಲಿದೆ. ಕೃಷಿಕರಿಗೆ ಡಿಎಪಿ ರಸಗೊಬ್ಬರ ಈಗ ಇರುವ ಹಳೆಯ ಬೆಲೆ 1,200 ರೂಪಾಯಿಯಲ್ಲೇ ಸಿಗಲಿದೆ. ಕಳೆದ ವರ್ಷ ಪ್ರತಿ ಬ್ಯಾಗ್ ಡಿಎಪಿ ರಸಗೊಬ್ಬರದ ಬೆಲೆ 1,700 ರೂಪಾಯಿ ಇತ್ತು. ಕೇಂದ್ರ ಸರ್ಕಾರ 500 ರೂಪಾಯಿ ಸಬ್ಸಿಡಿ ನೀಡುತ್ತಿತ್ತು. ಹೀಗಾಗಿ ಕಂಪನಿಗಳು 1,200 ರೂಪಾಯಿಗೇ ಡಿಎಪಿಯನ್ನು ರೈತರಿಗೆ ಮಾರಾಟ ಮಾಡುತ್ತಿದ್ದವು.

ರೈತರಿಗೆ ಗುಡ್ ನ್ಯೂಸ್ ★★★★★

» ಬ್ಯಾಗ್‌ಗೆ 1,200 ರೂ. ಸಹಾಯಧನ



ನಾವು ಶೇ.95ರಷ್ಟು ರಸಗೊಬ್ಬರ ಆಮದು ಮಾಡಿಕೊಳ್ಳುವ ಕಾರಣ ಅಂತಾರಾಷ್ಟ್ರೀಯ ಮಟ್ಟದಲ್ಲಿ ಆದ ಪರಿಣಾಮದಿಂದ ದರದಲ್ಲಿ ವ್ಯತ್ಯಾಸವಾಯಿತು. ರೈತರಿಗೆ ತೊಂದರೆಯಾಗ ಬಾರದೆಂದು ಐತಿಹಾಸಿಕ ನಿರ್ಧಾರ ಮಾಡಿದ್ದೇವೆ.

| ಸದಾನಂದ ಗೌಡ ಕೇಂದ್ರ ರಸಗೊಬ್ಬರ ಸಚಿವ

ಮೋದಿ ಫಟಾಫಟ್ ನಿರ್ಧಾರ

ಬುಧವಾರ ಪ್ರಧಾನಿ ಮೋದಿ ನೇತೃತ್ವದ ಸಭೆಯಲ್ಲಿ ರೈತರ ತೊಂದರೆ ಬಗ್ಗೆ ಪ್ರಸ್ತಾಪವಾಗುತ್ತಿದ್ದಂತೆ, ನಮ್ಮದು ರೈತ ಪರ ಸರ್ಕಾರ- ನಮ್ಮ ಸರ್ಕಾರದಿಂದ ರೈತರಿಗೆ ತೊಂದರೆಯಾಗ ಕೂಡದು. ಹೆಚ್ಚುವರಿ ಹೊರೆ ಆದರೂ ತೊಂದರೆ ಇಲ್ಲ ತಕ್ಷಣ ನೆರವಾಗಿ ಎಂದು ಪ್ರಧಾನಿ ಸೂಚಿಸಿದ್ದಾರೆ. ಮುಂದಿನ ಕಾರಿಫ್ ಅವಧಿಗೆ 14,755 ಕೋಟಿ ಹೆಚ್ಚುವರಿ ಹೊರೆ ಬೀಳುತ್ತದೆ ಎಂಬ ಪ್ರಸ್ತಾಪಕ್ಕೂ ತಕ್ಷಣವೇ ಸಮ್ಮತಿ ನೀಡಿದರು ಎಂದು ಸದಾನಂದ ಗೌಡ ವಿವರಿಸಿದರು.

20-05-2021 Vv Pg 01

For more information visit
University Library Website
Web - uasbagrilibindia.org
E-mail- librarian@uasbangalore.edu.in